ಆ) ಮೈಸೂರಿನ ಸಿ.ಎಫ್.ಟಿ.ಆರ್.ಐ. ಹಾಗೂ ಅಂಥಹ ಇತರ ಉದ್ಯಮಗಳಿಗೆ ಸರ್ಕಾರ ಸಹಾಯ ಮಾಡುವುದೇ;

ಇ) ಸದರಿ ಉದ್ಯಮಗಳನ್ನು ಪ್ರಾರಂಭಿಸಲು ಹಾಗೂ ಉತ್ತೇಜನ ನೀಡಲು ಸಹಾಯಧನವನ್ನು ನಿರ್ದಿಷ್ಟ ಅವಧಿಯಲ್ಲಿ ನೀಡುವ ಯೋಜನೆಗಳಿವೆಯೇ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು): ಆ) ಈ ಕೈಗಾರಿಕೆಗಳಿಗೆ ಬೇಕಾದ ಯಂತ್ರೋಪಕರಣಗಳನ್ನು ತಯಾರಿಸುವ ಹಾಗೂ ಸರಬರಾಜು ಮಾಡುವ ಸಂಸ್ಥೆಗಳು ರಾಜ್ಯದಲ್ಲಿವೆ. ಆಹಾರ ಸಂಸ್ಕರಣ ಕೈಗಾರಿಕೆಗಳಿಗೆ ಹಲವಾರು ರೀತಿಯ ಯಂತ್ರೋಪಕರಣಗಳು ಬೇಕಾಗಿದ್ದು, ಎಲ್ಲಾ ರೀತಿಯ ಯಂತ್ರೋಪಕರಣಗಳನ್ನು ಸರಬರಾಜು ಮಾಡುವ ಸಂಸ್ಥೆಗಳು ರಾಜ್ಯದಲ್ಲಿ ಇವೆ.

ಆ) ಸಿ.ಎಫ್.ಟಿ.ಆರ್.ಐ. ಸಂಸ್ಥೆ ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಯಾಗಿದ್ದು ಇದಕ್ಕೆ ಸರ್ಕಾರ ನೇರವಾಗಿ ಯಾವುದೇ ಸಹಾಯ ಮಾಡುವುದಿಲ್ಲ. ಆದರೆ ಈ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗೆ ಪರೋಕ್ಷವಾದ ಬೆಂಬಲ ನೀಡುತ್ತದೆ.

ಇ) ಆಹಾರ ಸಂಸ್ಕರಣ ಉದ್ಯಮಗಳನ್ನು ರಾಜ್ಯ ಸರ್ಕಾರ ತನ್ನ ಕೈಗಾರಿಕಾ ನೀತಿ 2001-06ರನ್ವಯ ಟ್ರಸ್ಟ್ ಸೆಕ್ಟರ್ ಕೈಗಾರಿಕೆ ಎಂದು ಗುರುತಿಸಿದ್ದು, ಆ ನೀತಿಯನ್ವಯ ನಿರ್ದಿಷ್ಟ ಮಿತಿಗೆ ಒಳಪಟ್ಟು ಬಂಡವಾಳ ಹೂಡಿಕೆ, ಸಹಾಯಧನ ಲಭಿಸುತ್ತದೆ.

ಇದಲ್ಲದೆ, ಕೇಂದ್ರ ಸರ್ಕಾರದ ಆಹಾರ ಸಂಸ್ಕರಣೆ ಉದ್ಯಮ ಸಚಿವಾಲಯವು ರಾಜ್ಯದಲ್ಲಿ ಸ್ಥಾಪಿಸುವ ಅರ್ಹ ಆಹಾರ ಸಂಸ್ಕರಣ ಉದ್ಯಮಗಳಿಗೆ ಕ್ಯಾಪಿಟಲ್ ವೆಚ್ಚ ಟೆಕ್ನಿಕಲ್ ಸಿವಿಲ್ ಕೆಲಸಗಳನ್ನು ಒಳಗೊಂಡಂತೆ ಶೇ 25ರಷ್ಟು ಅನುದಾನವನ್ನು ರೂ. 50 ಲಕ್ಷ ಗರಿಷ್ಟ ಮಿತಿಗೆ ಒಳಪಟ್ಟು ಆಯ್ದ ಯೋಜನೆಗಳ ಮೂಲಕ ನೀಡುತ್ತಿದೆ.

ರಾಜ್ಯದಲ್ಲಿ ಹೊಸ ಆಹಾರ ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ

2080 (2515) ಶ್ರೀ ಬಿಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಆ) ರಾಜ್ಯದಲ್ಲಿ ಆಹಾರ ಸಂಸ್ಕರಣೆ ಉದ್ಯಮಗಳು ಎಲ್ಲೆಲ್ಲಿ ಇವೆ. (ಹೆಸರು ಮತ್ತು ಉತ್ಪಾದಿಸುವ ವಿವರ ನೀಡುವುದು);

ಆ) ಸದರಿ ಉದ್ಯಮಗಳನ್ನು ಸಹಕಾರಿ, ಖಾಸಗಿ ಮತ್ತು ಲಿಮಿಟೆಡ್ ಕಂಪನಿಗಳು ಸ್ಥಾಪಿಸಿದೆಯೇ ಇಲ್ಲಿ ಉತ್ಪಾದಿಸುವ ಉತ್ಪನ್ನಗಳ ರಫ್ತು ಅವಕಾಶ ಇದೆಯೇ;

ಇ) ಸದರಿ ಉದ್ಯಮಗಳಿಗೆ ಕಚ್ಚಾ ಪದಾರ್ಥಗಳು (ಕೃಷಿ ತೋಟಗಾರಿಕೆ ಉತ್ಪನ್ನಗಳು) ಎಲ್ಲಿ ದೊರಕುತ್ತವೆ;

ಈ) ಹೊಸ ಸಂಸ್ಕರಣ ಘಟಕಗಳನ್ನು ಆರಂಭಿಸುವ ಅವಕಾಶ ಯಾವುದಕ್ಕೆ ಇದೆ? (ವಿವರ ನೀಡುವುದು)?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು): ಆ) ರಾಜ್ಯದಲ್ಲಿ ಸುಮಾರು 20,000 ಸಣ್ಣ ಪ್ರಮಾಣದ ಆಹಾರ ಸಂಸ್ಕರಣೆ ಉದ್ಯಮಗಳಿವೆಯಲ್ಲದೆ ಸುಮಾರು 90 ಮಧ್ಯಮ : ಬೃಹತ್ ಪ್ರಮಾಣದ ಆಹಾರ ಸಂಸ್ಕರಣೆ ಕೈಗಾರಿಕೆಗಳಿವೆ. ಈ ಕೈಗಾರಿಕೆಗಳು ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಪ್ರಸರಿಸಿವೆ.

ಅ) ಆಹಾರ ಸಂಸ್ಕರಣೆ ಉದ್ಯಮಗಳನ್ನು ಹೆಚ್ಚಾಗಿ ಖಾಸಗಿ ಮತ್ತು ಲಿಮಿಟೆಡ್ ಕಂಪನಿಗಳು ಸ್ಥಾಪಿಸಿವೆ. ಇಲ್ಲಿ ಉತ್ಪಾದಿಸುವ ಉತ್ಪನ್ನಗಳಿಗೆ ರಫ್ತು ಅವಕಾಶ ಇದೆ.

ಇ) ಈ ಉದ್ಯಮಗಳ ಕಚ್ಚಾ ಪದಾರ್ಥಗಳು (ಕೃಷಿ ತೋಟಗಾರಿಕೆ ಉತ್ಪನ್ನಗಳನ್ನು) ಸ್ಥಳೀಯವಾಗಿ ದೊರಕುತ್ತದೆ.

ಈ) ಧಾನ್ಯ, ತರಕಾರಿ, ಹಣ್ಣು ತೋಟಗಾರಿಕಾ ಉತ್ಪನ್ನಗಳು ಮತ್ತು ಸಾಂಬಾರ ಪದಾರ್ಥಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ರಾಜ್ಯದಲ್ಲಿ ಅವಕಾಶ ಇದೆ. ಮೀನುಗಾರಿಕೆ ಆಧಾರಿತ ಮಾಂಸ ಮತ್ತು ಹಾಲು ಕೈಗಾರಿಕೆಗಳಿಗೂ ರಾಜ್ಯದಲ್ಲಿ ಅವಕಾಶಗಳಿವೆ.

ನಾಗಮಂಗಲ ತಾಲ್ಲೂಕಿನಲ್ಲಿ ಗಣಿಗಾರಿಕೆಯಿಂದ ಉಂಟಾಗುತ್ತಿರುವ ತೊಂದರೆಗಳು

2081 (2313) ಶ್ರೀ ಚಲುವರಾಯ ಸ್ವಾಮಿ ಎನ್. (ನಾಗಮಂಗಲ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕು ಬೆಳ್ಳೂರು ಹೋಬಳಿ ಹದ್ದಿನಕಲ್ಲು ಹನುಮಂತರಾಯನ ಬೆಟ್ಟದ ತಪ್ಪಲಿನಲ್ಲಿ ಗ್ರಾನೈಟ್ ತೆಗೆಯುತ್ತಿರುವ ಗುತ್ತಿಗೆದಾರರಿಗೆ ಎಷ್ಟು ವರ್ಷಗಳಿಗೆ ಈ ಜಾಗವನ್ನು ಗುತ್ತಿಗೆಗೆ ನೀಡಲಾಗಿದೆ, ಇಲ್ಲಿ ಗ್ರಾನೈಟ್ ಕಲ್ಲನ್ನು ತೆಗೆಯುವಾಗ ಅಕ್ಕಪಕ್ಕದ ಹಳ್ಳಿ ಜನರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಈ ಗುತ್ತಿಗೆದಾರರ ವಿರುದ್ಧ ಕೈಗೊಂಡ ಕ್ರಮವೇನು;

ಆ) ಹೊಣಕೆರೆ ಹೋಬಳಿಯಲ್ಲಿ ಎಷ್ಟು ಸ್ಟೋನ್ ಕ್ರಶರ್ ಇದೆ, ಇವುಗಳಿಗೆ ಪರವಾನಗಿ ನೀಡಲಾಗಿದೆಯೇ; ನೀಡಿದ್ದರೆ ವಿವರ ಒದಗಿಸುವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಬೆಳ್ಳೂರು ಹೋಬಳಿ ಇರುಬನ ಹಳ್ಳಿ ಗ್ರಾಮದ ಸರ್ವೆ ನಂ. 73ರಲ್ಲಿ ಗಣಿಗಾರಿಕೆಗಾಗಿ 2 ಕಲ್ಲು ಗಣಿ ಗುತ್ತಿಗೆಗಳನ್ನು ನೀಡಿದೆ. ವಿವರ ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ಹೆಸರು	ಕಲ್ಲು ಗಣಿ ಗುತ್ತಿಗೆ ಅವಧಿ	ವಿಸ್ತೀರ್ಣ
1.	ಮೆ: ಸುದರ್ಶನ್ ಸ್ಟೋನ್ ಎಂಟರ್ ಪ್ರೈಸಸ್	ದಿನಾಂಕ 30-12-2000 ರಿಂದ 10 ವರ್ಷಗಳು	6-00 ಎಕರೆ
2.	ಮೆ: ಮೈಸೂರು ಮಿನರಲ್ಸ್ ಸಂಸ್ಥೆ, ಬೆಂಗಳೂರು	ದಿನಾಂಕ 3-7-2001 ರಿಂದ 10 ವರ್ಷಗಳು	14-20 ಎಕರೆ

ಈ ಗುತ್ತಿಗೆಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುವುದಿಲ್ಲ. ಆದ್ದರಿಂದ, ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಆ) ಹೊಣಕೇರಿ ಹೋಬಳಿಯಲ್ಲಿ ಮೂರು ಕ್ರಷರ್ ಘಟಕಗಳಿವೆ. ಸ್ಟೋನ್ ಕ್ರಷರ್‌ಗಳಿಗೆ ಪರವಾನಗಿ ನೀಡುವುದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಆದರೆ, ಈ ಕ್ರಷರ್ ಘಟಕಗಳನ್ನು ಹೊಂದಿರುವ ಅರ್ಜಿದಾರರಿಗೆ ಕಲ್ಲು ಗಣಿ ಗುತ್ತಿಗೆಗಳನ್ನು ಕಲ್ಲು ತೆಗೆಯಲು ನೀಡಲಾಗಿದೆ. ವಿವರ ಕೆಳಕಂಡಂತಿದೆ: